

ಸಂವಿಧಾನದ ಪಿತಾಮಹ, **ಡಾ. ಬಾಬಾಸಾಹೇಬ ಅಂಬೇಡ್ಕರವರ** ಧ್ಯೇಯಗಳೇ ನಮ್ಮ **'ಕರ್ನಾಟಕ ಅಭಿವೃದ್ಧಿ ಮಾದರಿ'**ಯ ದಿಕ್ಸೂಚಿಗಳು. ಈ ಮಾದರಿಯು ನಮ್ಮ ಸಂವಿಧಾನದ ಆಶಯಗಳಾದ ಜಾತ್ಯತೀತತೆ, ಸಮಾನತೆ ಮತ್ತು ಎಲ್ಲರನ್ನೂ ಒಳಗೊಳ್ಳುವ ಅಭಿವೃದ್ಧಿಯ ಮೇಲೆ ನೆಲೆನಿಂತಿದೆ.

# ಕರ್ನಾಟಕ ಅಭಿವೃದ್ಧಿ ಮಾದರಿ

## 1. ಹಸಿವುಮುಕ್ತ ಕರ್ನಾಟಕ

- **ಅನ್ನಭಾಗ್ಯ:** ರಾಜ್ಯದ ಜನಸಂಖ್ಯೆಯ ಶೇ.70ಕ್ಕೂ ಹೆಚ್ಚು ಜನರಿಗೆ ಉಚಿತ ಅಕ್ಕಿ ಮತ್ತು ರಿಯಾಯಿತಿ ದರದಲ್ಲಿ ಆಹಾರ ಧಾನ್ಯಗಳು.
- **ಇಂದಿರಾ ಕ್ಯಾಂಟೀನ್:** ₹ 5ಕ್ಕೆ ಬೆಳಗಿನ ಉಪಾಹಾರ ಮತ್ತು ₹10ಕ್ಕೆ ಮಧ್ಯಾಹ್ನ ಹಾಗೂ ರಾತ್ರಿಯ ಊಟ ನೀಡಲು ಬೆಂಗಳೂರಿನ 198 ವಾರ್ಡ್‌ಗಳಲ್ಲಿ ಹಾಗೂ ₹ 211.24 ಕೋಟಿ ವೆಚ್ಚದಲ್ಲಿ ರಾಜ್ಯದ 30 ಜಿಲ್ಲೆಗಳ 173 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಇಂದಿರಾ ಕ್ಯಾಂಟೀನ್‌ಗಳ ಸ್ಥಾಪನೆ.
- **ಕ್ಷೀರಭಾಗ್ಯ ಮತ್ತು ಅಕ್ಷರ ದಾಸೋಹ:** ರಾಜ್ಯಾದ್ಯಂತ 1 ಕೋಟಿಗೂ ಹೆಚ್ಚು ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಬಿಸಿಯೂಟ ಮತ್ತು ಹಾಲು ಪೂರೈಕೆ.
- **ಮಾತೃಪೂರ್ಣ:** ವಾರದಲ್ಲಿ 6 ದಿನ ಗರ್ಭಿಣಿ ಮತ್ತು ಹಾಲುಣಿಸುವ ತಾಯಂದಿರಿಗೆ ಮೊಟ್ಟೆ, ಹಾಲು ಸಹಿತ ಪೌಷ್ಠಿಕ ಆಹಾರ ಪೂರೈಕೆ; 10 ಲಕ್ಷಕ್ಕೂ ಹೆಚ್ಚು ಫಲಾನುಭವಿಗಳು.

## 2. ಮಹಿಳಾ ಸಬಲೀಕರಣ

- **ಸ್ವಸಹಾಯ ಸಂಘಗಳು:** ಸ್ತ್ರೀಶಕ್ತಿ ಸಂಘಗಳಿಗೆ ನೀಡಲಾಗುತ್ತಿದ್ದ ಆವರ್ತ ನಿಧಿ ₹ 25,000ಕ್ಕೆ ಏರಿಕೆ: 1.31 ಲಕ್ಷ ಫಲಾನುಭವಿ ಸಂಘಗಳು.
- **ಮನಸ್ವಿನಿ:** 1.5 ಲಕ್ಷ ಅವಿವಾಹಿತ, ಪರಿತ್ಯಕ್ತ ಮತ್ತು ವಿಚ್ಛೇಧಿತ ಮಹಿಳೆಯರಿಗೆ ಪಿಂಚಣಿ ಸೌಲಭ್ಯ.
- **ಮಹಿಳಾ ಉದ್ಯಮಶೀಲರಿಗೆ ಸ್ಟಾರ್ಟ್ ಅಪ್ ನಿಧಿ:** ಐಡಿಯಾ 2 ಪಿ.ಒ.ಸಿ. ಯೋಜನೆ ಮೂಲಕ ಐಟಿ ಕ್ಷೇತ್ರದಲ್ಲಿ ಸಂಚಲನ ಮೂಡಿಸುವಂತಹ ಆಲೋಚನೆಯುಳ್ಳ ಮಹಿಳಾ ಉದ್ಯಮಶೀಲರನ್ನು ಪ್ರೋತ್ಸಾಹಿಸಲು ₹ 10 ಕೋಟಿ ಮೊತ್ತದ ನಿಧಿ.
- **ಕೈಗಾರಿಕಾ ಪಾರ್ಕ್‌ಗಳು:** ಮಹಿಳೆಯರಿಗೇ ಮೀಸಲಾದ ಕೈಗಾರಿಕಾ ಪಾರ್ಕ್ ಅರ್ಪಿಸಿದ ಮೊದಲ ರಾಜ್ಯ.
- ಮಹಿಳಾ ಮತ್ತು ಮಕ್ಕಳ ಸುರಕ್ಷತೆಗಾಗಿ 108 ಗುಲಾಬಿ ಹೊಯ್ಸಳ ಗಸ್ತು ವಾಹನಗಳು.

## 3. ಮೂಲಸೌಕರ್ಯ ಮತ್ತು ಕೈಗಾರಿಕೆ

- 5 ವರ್ಷಕ್ಕಿಂತ ಕಡಿಮೆ ಅವಧಿಯಲ್ಲಿ ₹9,616 ಕೋಟಿ ವೆಚ್ಚದಲ್ಲಿ 9,644 ಕಿ.ಮೀ. ಉದ್ದದ ರಾಜ್ಯ ಹೆದ್ದಾರಿಗಳ ಅಭಿವೃದ್ಧಿ.
- ₹372 ಕೋಟಿ ವೆಚ್ಚದಲ್ಲಿ 299 ಮುಖ್ಯ ಸೇತುವೆಗಳ ಅಭಿವೃದ್ಧಿ.
- **ನಮ್ಮ ಮೆಟ್ರೋ:** 1ನೇ ಹಂತದಲ್ಲಿ 42.3 ಕಿಮೀ ಮಾರ್ಗ ಪೂರ್ಣ; 2ನೇ ಹಂತದಲ್ಲಿ 72 ಕಿ.ಮೀ ಮಾರ್ಗ ನಿರ್ಮಾಣ ಪ್ರಗತಿಯಲ್ಲಿ; 3ನೇ ಹಂತದ ಕಾಮಗಾರಿಗೆ ಚಾಲನೆ.
- ₹50 ಸಾವಿರ ಕೋಟಿ ವೆಚ್ಚದಲ್ಲಿ ಪ್ರಮುಖ ನೀರಾವರಿ ಕಾಲುವೆಗಳ ಅಭಿವೃದ್ಧಿ.
- **ಕೆರೆ ಸಂಜೀವಿನಿ:** ₹100 ಕೋಟಿ ವೆಚ್ಚದಲ್ಲಿ ಕೆರೆಗಳ ಹೂಳು ತೆಗೆಯುವಿಕೆ.
- **ವೈಮಾನಿಕ ಪಾರ್ಕ್:** 252 ಎಕರೆ ವೈಮಾನಿಕ ವಿಶೇಷ ವಿತ್ತ ವಲಯದೊಂದಿಗೆ 1000 ಎಕರೆ ವೈಮಾನಿಕಾಂತರಿಕ್ಷ ಪಾರ್ಕ್.

## 4. ಜೀವನೋಪಾಯದ ಭದ್ರತೆ

- **ಕೃಷಿಭಾಗ್ಯ:** ಕೃಷಿ ಹೊಂಡಗಳ ಮೂಲಕ ವಿಸ್ತೃತ ನೀರಾವರಿ ಸೌಲಭ್ಯ; 1.68 ಲಕ್ಷ ಫಲಾನುಭವಿಗಳು/ಕೃಷಿ ಹೊಂಡಗಳು.
- **ಕೃಷಿ ಇ-ಮಾರುಕಟ್ಟೆ:** ಕೃಷಿ ಮಾರಾಟದಲ್ಲಿ ಆನ್‌ಲೈನ್ ವ್ಯಾಪಾರವನ್ನು ಮತ್ತು ಏಕೀಕೃತ ಮಾರುಕಟ್ಟೆ ವೇದಿಕೆಯನ್ನು ಸ್ಥಾಪಿಸಿದ ಮೊದಲ ರಾಜ್ಯ; ಇದರಿಂದಾಗಿ ಕರ್ನಾಟಕದ ರೈತರ ಆದಾಯದಲ್ಲಿ 38% ಏರಿಕೆ.
- **ಕೌಶಲ್ಯ ಕರ್ನಾಟಕ:** ಪ್ರತಿ ವರ್ಷ 5 ಲಕ್ಷ ಯುವಜನರಿಗೆ ಅವಶ್ಯ ವೃತ್ತಿ ಕೌಶಲ್ಯಗಳ ತರಬೇತಿ.
- ಕೈಗಾರಿಕಾ ಇಲಾಖೆಯಿಂದ 15 ಲಕ್ಷ ಉದ್ಯೋಗಗಳ ಸೃಷ್ಟಿ.
- **ಸ್ಟಾರ್ಟ್ ಅಪ್ ಕರ್ನಾಟಕ:** ಬಹುವಲಯ ಸ್ಟಾರ್ಟ್ ಅಪ್ ನೀತಿಯನ್ನು ಅಳವಡಿಸಿಕೊಂಡ ಮೊದಲ ರಾಜ್ಯ.

## 5. ಸಾಮಾಜಿಕ ನ್ಯಾಯ

- **ಪರಿಶಿಷ್ಟ ಜಾತಿ/ಪಂಗಡಗಳ ವಿಶೇಷ ಉಪಯೋಜನೆ:** ಕಳೆದ ಐದು ವರ್ಷದಲ್ಲಿ ₹ 87,000 ಕೋಟಿ ಅನುದಾನದೊಂದಿಗೆ, ಕರ್ನಾಟಕ ಎಸ್‌ಸಿಎಸ್‌ಪಿ-ಟಿಎಸ್‌ಪಿ ಕಾಯ್ದೆ, 2013 ಅನ್ನು ಜಾರಿಗೆ ತಂದ ಮೊದಲ ರಾಜ್ಯ.
- ಸಮಾಜದ ದುರ್ಬಲ ಸಮುದಾಯದ ವಿದ್ಯಾರ್ಥಿಗಳಿಗಾಗಿ 818 ವಸತಿಶಾಲೆಗಳು.
- **ಮೈತ್ರಿ ಯೋಜನೆ:** ಲಿಂಗತ್ವ ಅಲ್ಪಸಂಖ್ಯಾತರ ಜೀವನ ಘನತೆಯನ್ನು ಸುಧಾರಿಸಲು ಮಾಸಿಕ ಪಿಂಚಣಿ; ₹ 8.38 ಕೋಟಿ ಅನುದಾನ ನಿಗದಿ; 4,488 ಫಲಾನುಭವಿಗಳು.

## 6. ಎಲ್ಲರಿಗೂ ಶಿಕ್ಷಣ

- ಕಡಿಮೆ ಆದಾಯವಿರುವ ಕುಟುಂಬದ ಹೆಣ್ಣುಮಕ್ಕಳಿಗೆ ಪದವಿಯವರೆಗೆ ಉಚಿತ ಶಿಕ್ಷಣ.
- **ವಿದ್ಯಾಸಿರಿ:** ಹಾಸ್ಟೆಲ್ ಸೌಲಭ್ಯ ವಂಚಿತ ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ವಾರ್ಷಿಕ ₹ 15,000 ಆರ್ಥಿಕ ನೆರವು; 3.65 ಲಕ್ಷ ಫಲಾನುಭವಿ ವಿದ್ಯಾರ್ಥಿಗಳು.
- **ಅರಿವು:** ತಾಂತ್ರಿಕ ಮತ್ತು ವೈದ್ಯಕೀಯ ಶಿಕ್ಷಣ ಪಡೆಯುತ್ತಿರುವ 78,536 ವಿದ್ಯಾರ್ಥಿಗಳಿಗೆ ಒಟ್ಟು ₹ 230 ಕೋಟಿ ಆರ್ಥಿಕ ನೆರವು.
- **ವಿದ್ಯಾರ್ಥಿಗಳಿಗೆ ಉಚಿತ ಲ್ಯಾಪ್‌ಟಾಪ್:** ಉನ್ನತ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳಿಗೆ ಅನುಕೂಲ.

## 7. ವಸತಿಭಾಗ್ಯ – ಸರ್ವರಿಗೂ ಸೂರು

- ರಾಜ್ಯವನ್ನು ಗುಡಿಸಲು ಮುಕ್ತ ರಾಜ್ಯವಾಗಿಸಲು ಕಳೆದ 5 ವರ್ಷದಲ್ಲಿ ₹20,000 ಕೋಟಿ ವೆಚ್ಚದಲ್ಲಿ 15 ಲಕ್ಷ ಮನೆಗಳ ನಿರ್ಮಾಣ.
- ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಡಿ ಕೈಗೆಟುಕುವ ವಸತಿ ಯೋಜನೆಗಳು.
- ಕೊಳೆಗೇರಿ ನಿವಾಸಿಗಳಿಗಾಗಿ 50,000 ಮನೆಗಳ ನಿರ್ಮಾಣ.



**ಭಾರತ ಗಣರಾಜ್ಯಕ್ಕೆ, ಕರ್ನಾಟಕ ಒಂದು ಹೆಮ್ಮೆ!**

**ಗಣರಾಜ್ಯೋತ್ಸವ ದಿನದ ಶುಭಾಶಯಗಳು.**

**ನವ ಕರ್ನಾಟಕ ನಿರ್ಮಾಣಕ್ಕೆ**

ಸದಾ ಸಿದ್ಧ ಸರ್ಕಾರ

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: ವಾಟ್ಸ್‌ಆಪ್ ಅಥವಾ ಟೆಲಿಗ್ರಾಂ: 99011 00000 ಡೌನ್‌ಲೋಡ್ ಮಾಡಿ 'SIDDARAMAIAH' ಮೊಬೈಲ್ ಆಪ್ GET IT ON Google Play Download on the App Store

ಕರ್ನಾಟಕ ವಾರ್ತೆ | **ಆಯುಕ್ತರು,** ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಪ್ರಕಟಣೆ, **ಸಾರ್ವಜನಿಕರ ಮಾಹಿತಿಗಾಗಿ** ಎಲ್ಲಾ ವೈಯಕ್ತಿಕ ಮತ್ತು ಸಾಮೂಹಿಕ ಚಟುವಟಿಕೆಗಳಲ್ಲಿ ಉನ್ನತಿಯನ್ನು ಸಾಧಿಸಲು ಪ್ರಯತ್ನಿಸಿ ದೇಶದ ಪ್ರಗತಿಗಾಗಿ ಶ್ರಮಿಸುವುದು- ಇದು ಭಾರತದ ನಾಗರೀಕರ ಸಂವಿಧಾನಬದ್ಧ ಮೂಲಭೂತ ಕರ್ತವ್ಯವಾಗಿದೆ.